## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **635** |
| **ಸದಸ್ಯರ ಹೆಸರು** | : | **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **22.07.2024** |
| **ಉತ್ತರಿಸುವವರು** | : | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಯಂ ಗುತ್ತಿಗೆ ಆಧಾರದ ಮೇಲೆ ವನ್ಯಜೀವಿ ಸಂರಕ್ಷಕರು (ಹಾವು, ಮಂಗ, ಮೊಸಳೆ , ರಣಹದ್ದು, ಬಾವಲಿ ಪಕ್ಷಿ) ಎಷ್ಟು ಜನ ಇದ್ದಾರೆ; ಇವರಿಗೆ ಎಷ್ಟು ಗೌರವಧನ ನೀಡಲಾಗುತ್ತಿದೆ; (ವಿವರ ನೀಡುವುದು). | ಅರಣ್ಯ ಇಲಾಖೆಯಿಂದ ಯಾವುದೇ ಖಾಯಂ/ಗುತ್ತಿಗೆ ಆಧಾರದಲ್ಲಿ ವನ್ಯಜೀವಿ ಸಂರಕ್ಷಕರನ್ನು ನೇಮಿಸಿರುವುದಿಲ್ಲ. |
| (ಆ) | ರಾಜ್ಯದ ಸಾರ್ವಜನಿಕ ಪ್ರದೇಶಗಳಲ್ಲಿ ವನ್ಯಜೀವಿ (ಹಾವು, ಮಂಗ, ಮೊಸಳೆ, ರಣಹದ್ದು, ಬಾವಲಿ ಪಕ್ಷಿ) ವನ್ಯಜೀವಿ ಸಂರಕ್ಷಕರ ಮೇಲೆ ಎಷ್ಟು ದಾಳಿಯಾಗಿದೆ; ಎಷ್ಟು ಜನ ಮೃತಪಟ್ಟಿದ್ದಾರೆ; ಎಷ್ಟು ಪ್ರಕರಣ ದಾಖಲಾಗಿದೆ; (ವಿವರ ನೀಡುವುದು) | ಅನ್ವಯಿಸುವುದಿಲ್ಲ. |
| (ಇ) | ವನ್ಯಜೀವಿ ಸಂರಕ್ಷಕರು ಈ ವನ್ಯಜೀವಿಗಳ ಸಂರಕ್ಷಣೆಯ ಸಂದರ್ಭದಲ್ಲಿ ಹಾವು ಕಡಿತ, ಪ್ರಾಣಿ ದಾಳಿಯಿಂದ ಮೃತಪಟ್ಟರೆ, ಖಾಯಂ ಆಗಿ ಅಂಗವಿಕಲತೆ ಹೊಂದಿದ್ದರೆ ಸರ್ಕಾರದಿಂದ ಸಿಗುವ ಸೌಲಭ್ಯಗಳೇನು; (ವಿವರ ನೀಡುವುದು) | ಅನ್ವಯಿಸುವುದಿಲ್ಲ. |
| (ಈ) | ಕಳೆದ ಎರಡು ವರ್ಷಗಳಲ್ಲಿ ರಾಜ್ಯದಾದ್ಯಂತ ವನ್ಯಜೀವಿಗಳಿಂದ (ಹಾವು, ಮಂಗ, ಮೊಸಳೆ , ರಣಹದ್ದು, ಬಾವಲಿ ಪಕ್ಷಿ) ಎಷ್ಟು ಸಾರ್ವಜನಿಕರ ಮೇಲೆ ದಾಳಿಯಾಗಿವೆ; ಎಷ್ಟು ಜನರು ಮರಣ ಹೊಂದಿದ್ದಾರೆ; ಎಷ್ಟು ಪ್ರಕರಣಗಳು ದಾಖಲಾಗಿವೆ; (ವಿವರ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ವನ್ಯಜೀವಿಗಳಾದ ಹಾವು, ಮಂಗ, ಮೊಸಳೆ , ರಣಹದ್ದು, ಬಾವಲಿ ಪಕ್ಷಿ ಗಳಿಂದ ಸಾರ್ವಜನಿಕರ ಮೇಲೆ ದಾಳಿ ಆಗಿರುವ ಪ್ರಕರಣಗಳ ವಿವರ: |

| ಪ್ರಭೇದ ಗಳು | 2022-23 | 2023-24 |
|---|---|---|
| ಹಾವು | ಅರಣ್ಯ ಇಲಾಖೆಯಲ್ಲಿ ಈ ಮಾಹಿತಿ ಲಭ್ಯವಿರುವುದಿಲ್ಲ | |
| ಮಂಗ | | |
| ಮೊಸಳೆ | 4 | 1 |
| ರಣಹದ್ದು | - | - |
| ಬಾವಲಿ ಪಕ್ಷಿ | - | - |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಉ)</td><td>ಕಳೆದ ಎರಡು ವರ್ಷಗಳಿಂದ ಹಾವು, ಮಂಗ, ಮೊಸಳೆ ರಣಹದ್ದು, ಬಾವಲಿ ಪಕ್ಷಿ ಹಾಗೂ ಇನ್ನಿತರೆ ವನ್ಯಜೀವಿಗಳನ್ನು ಸಂರಕ್ಷಿತ ಅರಣ್ಯಕ್ಕೆ ಬಿಡಲಾಗಿದೆ; ಹಾವುಗಳು, ಬಾವಲಿಗಳು, ರಣಹದ್ದುಗಳು ಮತ್ತು ಮೊಸಳೆಗಳ ಸಂಖ್ಯೆ ಎಷ್ಟು; (ಸಂಪೂರ್ಣವಾಗಿ ವಿವರ ನೀಡುವುದು)</td><td>ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಹಾವು, ಮಂಗ, ಮೊಸಳೆ ರಣಹದ್ದು, ಬಾವಲಿ ಪಕ್ಷಿ ಹಾಗೂ ಇನ್ನಿತರೆ ವನ್ಯಜೀವಿಗಳನ್ನು ಸಂರಕ್ಷಿಸಿ ಅರಣ್ಯಕ್ಕೆ ಬಿಡುಗಡೆ ಮಾಡಲಾದ ವಿವರ ಈ ಕೆಳಕಂಡಂತಿದೆ:
<table>
<tr><th>ವನ್ಯಜೀವಿ ಪ್ರಭೇದ ಗಳು</th><th>2022-23</th><th>2023-24</th></tr>
<tr><td>ಹಾವು</td><td>1087</td><td>997</td></tr>
<tr><td>ಮಂಗ</td><td>151</td><td>47</td></tr>
<tr><td>ಮೊಸಳೆ</td><td>20</td><td>30</td></tr>
<tr><td>ರಣಹದ್ದು</td><td>-</td><td>-</td></tr>
<tr><td>ಬಾವಲಿ</td><td>-</td><td>-</td></tr>
</table>
</td></tr>
<tr><td>(ಊ)</td><td>ಇಂತಹ ಪ್ರಕರಣಗಳಲ್ಲಿ ಮೃತಪಟ್ಟ ನೌಕರರ ಕುಟುಂಬಗಳಿಗೆ ಸಹಾಯಕ ಧನ / ಉದ್ಯೋಗ ನೀಡಲಾಗಿದೆಯೇ? (ಮಾಹಿತಿ ನೀಡುವುದು).</td><td>ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಗಾಯಗೊಂಡ ಪ್ರಕರಣಗಳಲ್ಲಿ ನೀಡುತ್ತಿರುವ ಪರಿಹಾರ ಧನ ಮತ್ತು ಮಾಸಾಶನ ಧನವನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್.ಡಬ್ಲ್ಯು.ಎಲ್ 2022, ಬೆಂಗಳೂರು ದಿನಾಂಕ:15-12-2022ರ ಪ್ರಕಾರ ನಿಯಮಾನುಸಾರ ಪಾವತಿಸಲಾಗುತ್ತಿದೆ.<br><br>ಮುಂದುವರೆದು ಹಾವು ಕಚ್ಚಿ ಮರಣ ಹೊಂದಿದಲ್ಲಿ ಕಂದಾಯ ಇಲಾಖೆಯವರ ಸುತ್ತೋಲೆ ಸಂಖ್ಯೆ: ಕಂಇ 49 ಎಂ.ಎಸ್.ಟಿ. 2020 (ಇ) ದಿನಾಂಕ: 26.08.2020 ರನ್ವಯ ಜಿಲ್ಲಾಡಳಿತದ ವತಿಯಿಂದ ಪರಿಹಾರ ಪಾವತಿಸಲಾಗುತ್ತಿದೆ.</td></tr>
</table>

**ಸಂಖ್ಯೆ: ಅಪಜೀ 107 ಎಫ್‌ಡಬ್ಲ್ಯೂಎಲ್ 2024**

**(ಈಶ್ವರ ಬಿ.ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು